## ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಾರ್ಕಳ ಇವರ ನ್ಯಾಯಾಲಯದಲ್ಲಿ

ದಿನಾಂಕ 12 ನೇ ಜೂನ್ ಮಾಹೆ 2023 ನೇ ಇಸವಿ.

ಕ್ರಿಮಿನಲ್ ಮೊಕದ್ದಮೆ ನಂಃ 1707/2022

ರಾಜ್ಯ ಸರ್ಕಾರದ ಪರವಾಗಿ

ಠಾಣಾಧಿಕಾರಿ,
ಹೆಬ್ರಿ ಪೋಲೀಸ್ ಠಾಣೆ,
ಹೆಬ್ರಿ, ಉಡುಪಿ ಜಿಲ್ಲೆ. ... ಪಿರ್ಯಾದುದಾರರು

- ವಿರುದ್ಧ -

ಅಜೀಜ್ ಮತ್ತು ಇತರರು ... ಆರೋಪಿತರು

1. ಅಜೀಜ್
ಪ್ರಾಯಃ 34 ವರ್ಷಗಳು,
ತಂದೆಃ ಇಸ್ಮಾಯಿಲ್,
ವಾಸಃ ನಂ.2-105, ಕಾಂತಾರ ಬೆಟ್ಟು ಹೌಸ್,
ಉಲಾಯಿಬೆಟ್ಟು ಅಂಚೆ ಮತ್ತು ಗ್ರಾಮ,
ಮಂಗಳೂರು ತಾಲೂಕು, ದ.ಕ. ಜಿಲ್ಲೆ

2. ರಹೀಮ್,
ಪ್ರಾಯಃ 39 ವರ್ಷ
ತಂದೆಃ ಎಂ.ಡಿ ಮೊಹಮ್ಮದ್,
ವಾಸಃ 4-139, ಶಾಂತಿಗುಡ್ಡೆ, ಜೋಡುಕಟ್ಟೆ ಅಂಚೆ,
62 ನೇ ತೋಕುರು ಗ್ರಾಮ,
ಮಂಗಳೂರು ತಾಲೂಕು, ದ.ಕ. ಜಿಲ್ಲೆ

3. ಮೊಹಮ್ಮದ್ ಆಶಿಕ್,
ಪ್ರಾಯಃ 24 ವರ್ಷ
ತಂದೆಃ ಮೊಹಮ್ಮದ್ ಫಾರೂಕ್,
ವಾಸಃ 3-8 ಎ, ಬಂಡಶಾಲೆ ಹೌಸ್, ಜೋಡುಕಟ್ಟೆ ಅಂಚೆ,
62 ನೇ ತೋಕುರು ಗ್ರಾಮ,
ಮಂಗಳೂರು ತಾಲೂಕು, ದ.ಕ. ಜಿಲ್ಲೆ

4. ಹರೂನ್ ರಶಿದ್,
ಪ್ರಾಯಃ 35 ವರ್ಷ
ತಂದೆಃ ಉಮ್ಮರ್ ಫಾರೂಕ್,
ವಾಸಃ 4-80, ಬೆಟ್ಟು ಹೌಸ್, ಕೆ.ಬಿ.ಎಸ್,
62 ನೇ ತೋಕುರು ಗ್ರಾಮ, ಜೋಡುಕಟ್ಟೆ ಅಂಚೆ,
ಬೈಕಂಪಾಡಿ, ಮಂಗಳೂರು ತಾಲೂಕು, ದ.ಕ. ಜಿಲ್ಲೆ

5. ಹಸನಬ್ಬ,
ಪ್ರಾಯಃ 36 ವರ್ಷ
ತಂದೆಃ ಹುಸೈನಬ್ಬ,
ವಾಸಃ 4-112/10, ಕೆಂಜಾರು ಅಂಜುಮಾನ್ ಶಾಲೆಯ ಬಳಿ,
ಕೆಂಜಾರು ಗ್ರಾಮ, ಬೈಕಂಪಾಡಿ,
ಮಂಗಳೂರು ತಾಲೂಕು, ದ.ಕ. ಜಿಲ್ಲೆ ... ಆರೋಪಿತರು

## ದೋಷಾರೋಪಣೆ

ಶ್ರೀಮತಿ ಕೋಮಲ ಆರ್. ಸಿ. ಬಿ.ಎ., ಎಲ್‌ಎಲ್.ಬಿ., ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಈ ಮೇಲ್ಕಂಡ ನಿಮ್ಮನ್ನು ಕೆಳಕಂಡಂತೆ ದೋಷಾರೋಪಿಸುತ್ತೇನೆ.

1 ರಿಂದ 5 ನೇ ಆರೋಪಿತರಾದ ನೀವು 13.04.2022 ರಂದು ಮುಂಜಾನೆ 00.30 ಗಂಟೆಗೆ ಜಾನುವಾರುಗಳನ್ನು ಕಳವು ಮಾಡುವ ಸಮಾನ ಉದ್ದೇಶದಿಂದ ಪಿಕಾಪ್ ವಾಹನ ನೊಂದಣಿ ಸಂಖ್ಯೆಃಕೆಎ 19-ಡಿ-9907 ನೇಯದರಲ್ಲಿ ನಾಡ್ವಾಲು ಗ್ರಾಮದ ದುಳ್ಳಿ ಎಂಬಲ್ಲಿ ರಸ್ತೆಯ ಬದಿಯಲ್ಲಿ ಮಲಗಿದ್ದ 06 ಜಾನುವಾರುಗಳನ್ನು ಮತ್ತು ಮುಂಜಾನೆ 1.00 ಗಂಟೆಗೆ ನಾಡ್ವಾಲು ಗ್ರಾಮದ ಅಂಗಡಿ ಬೆಟ್ಟು ಎಂಬಲ್ಲಿನ ಬಸ್ಸು ನಿಲ್ದಾಣದ ಬದಿಯಲ್ಲಿ ಮಲಗಿದ್ದ 04 ಜಾನುವಾರುಗಳನ್ನು ಹಾಗೂ ಮುಂಜಾನೆ 01.30 ಗಂಟೆಗೆ ಬೆಳಂಜೆ ಗ್ರಾಮದ ತೆಂಕೂಲ ಎಂಬಲ್ಲಿ ರಸ್ತೆಯ ಬದಿಯಲ್ಲಿ ಮಲಗಿದ್ದ 04 ಜಾನುವಾರುಗಳನ್ನು ಒಟ್ಟು 14 ಜಾನುವಾರುಗಳನ್ನು ಕಳ್ಳತನ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 379 ಸಹವಾಚಕ 34 ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಎರಡನೇಯದಾಗಿ, 2 ನೇ ಆರೋಪಿತರಾದ ನೀವು ಈ ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ, 1,3,4 ಮತ್ತು 5 ನೇ ಆರೋಪಿತರೊಂದಿಗೆ ಸೇರಿಕೊಂಡು ಕಳ್ಳತನ ಮಾಡಿದ ಜಾನುವಾರುಗಳನ್ನು ಪಿಕಾಪ್ ವಾಹನ ನೊಂದಣಿ ಸಂಖ್ಯೆಃಕೆಎ 19-ಡಿ-9907 ನೇಯದರಲ್ಲಿ ಅವುಗಳಿಗೆ ಹಿಂಸೆಯಾಗುವ ರೀತಿಯಲ್ಲಿ ಒಂದರ ಮೇಲೆ ಒಂದರಂತೆ ಯದ್ವಾತದ್ವಾವಾಗಿ ತಂಬಿಸಿ ಮಂಗಳೂರು ಕಾಸಾಯಿಖಾನೆಗೆ ಮಾರಾಟ ಮಾಡುವ ಉದ್ದೇಶದಿಂದ ನಾಡ್ಪಾಲು ಗ್ರಾಮದ ಕಾಸನಮಕ್ಕಿ ಸರ್ಕಲ್ ಬಳಿ ಕಾಸನಮಕ್ಕಿ ಕಡೆಯಿಂದ ಅತೀವೇಗ ಚಲಾಯಿಸಿಕೊಂಡು ಬರುತ್ತಿರುವುದನ್ನು ಕಂಡು ಸಾಕ್ಷಿ-1 ನೇಯವರು ಸಾಕ್ಷಿ-2 ಮತ್ತು ಸಾಕ್ಷಿ-3 ರವರೊಂದಿಗೆ ವಾಹನವನ್ನು ನಿಲ್ಲಿಸುವ ಸೂಚನೆ ನೀಡಿದಾಗ ವಾಹನವನ್ನು ನಿಲ್ಲಿಸದೇ ಉಡುಪಿ ಕಡೆಗೆ ಅತೀವೇಗವಾಗಿ ಚಲಾಯಿಸಿಕೊಂಡು ಹೋಗಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ಸಹವಾಚಕ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೂರನೇಯದಾಗಿ, 1 ರಿಂದ 5 ನೇ ಆರೋಪಿತರಾದ ನೀವು ಈ ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ, ಜಾನುವಾರುಗಳನ್ನು ಮಾಂಸಕ್ಕಾಗಿ ಕಸಾಯಿಖಾನೆಗೆ ಮಾರಾಟ ಮಾಡುವ ಉದ್ದೇಶದಿಂದ ಯಾವುದೇ ಪರವಾನಿಗೆ ಇಲ್ಲದೆ ಕಳುವು ಮಾಡಿದ ದನಗಳ ಕುತ್ತಿಗೆಗೆ ಹುರಿ ಹಗ್ಗವನ್ನು ಕಟ್ಟಿ ಹಿಂಸಾತ್ಮಕವಾಗಿ ಒಂದರ ಮೇಲೆ ಒಂದರಂತೆ ಯದ್ವಾತದ್ವಾವಾಗಿ ತಂಬಿಸಿ ಪಿಕಾಪ್ ವಾಹನ ನೊಂದಣಿ ಸಂಖ್ಯೆಃಕೆಎ 19-ಡಿ-9907 ನೇಯದರಲ್ಲಿ ತುಂಬಿಸಿ ಸಾಗಟ ಮಾಡುತ್ತಿದ್ದು, ಆ ಮೂಲಕ ಕಲಂ 4, 5, 7 12 ಕರ್ನಾಟಕ ಜಾನುವಾರು ಹತ್ಯೆ ಪ್ರತಿಭಂಧಕ ಮತ್ತು ಸಂರಕ್ಷಣೆ ಕಾಯ್ದೆ 2020 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ನಾಲ್ಕನೇಯದಾಗಿ, 1 ರಿಂದ 5 ನೇ ಆರೋಪಿತರಾದ ನೀವು ಈ ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ, ಜಾನುವಾರುಗಳನ್ನು ಮಾಂಸಕ್ಕಾಗಿ ಕಸಾಯಿಖಾನೆಗೆ ಮಾರಾಟ ಮಾಡುವ ಉದ್ದೇಶದಿಂದ ಯಾವುದೇ ಪರವಾನಿಗೆ ಇಲ್ಲದೆ

ಕಳುವು ಮಾಡಿದ ದನಗಳ ಕುತ್ತಿಗೆಗೆ ಹಿಂಸಾತ್ಮಕವಾಗಿ ಹುರಿ ಹಗ್ಗವನ್ನು ಕಟ್ಟಿ ಪಿಕಾಪ್ ವಾಹನದಲ್ಲಿ ಯದ್ವತದ್ವವಾಗಿ ತುಂಬಿಸಿ ಸಾಗಟ ಮಾಡುತ್ತಿದ್ದು, ಆ ಮೂಲಕ ಕಲಂ 11(1)(ಡಿ) ಪ್ರಾಣಿ ಹಿಂಸಾ ಪ್ರತಿಭಂಧಕ ಕಾಯ್ದೆ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಐದನೇಯದಾಗಿ, 1 ರಿಂದ 5 ನೇ ಆರೋಪಿತರಾದ ನೀವು ಈ ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ಪಿಕಾಪ್ ವಾಹನ ನೊಂದಣಿ ಸಂಖ್ಯೆಃಕೆಎ 19-ಡಿ-9907 ನೇಯದನ್ನು 2 ನೇ ಆರೋಪಿಯು ಸಾಕ್ಷಿ-1 ರಿಂದ ಸಾಕ್ಷಿ-3 ರವರು ಇಲಾಖಾ ವಾಹನದಲ್ಲಿ ಬೆನ್ನಟ್ಟಿದಾಗ ಇನ್ನೂ ವೇಗವಾಗಿ ವಾಹವನ್ನು ಚಲಾಯಿಸಿ ಶಿವಪುರ ಗ್ರಾಮದ ಬ್ಯಾಣ ಎಂಬಲ್ಲಿಗೆ ತಲುಪಿದಾಗ ಪೋಲಿಸರಿಂದ ತಪ್ಪಿಸಿಕೊಳ್ಳಲು ಎಡಬದಿಯಲ್ಲಿ ತಿರುಗಿಸಿ ರಸ್ತೆಯ ಬದಿಯಲ್ಲಿರುವ ಸಾಕ್ಷಿ-6 ನೇಯವರ ಅಂಗಡಿಗೆ ಡಿಕ್ಕಿ ಹೊಡೆದು ಜಖಂಗೊಳಿಸಿ ಹಾನಿಯನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 427 ಸಹವಾಚಕ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಆರನೇಯದಾಗಿ, 2 ನೇ ಆರೋಪಿತರಾದ ನೀವು ಈ ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ನಿಮ್ಮ ಮಾಲೀಕತ್ವದ ಪಿಕಾಪ್ ವಾಹನ ನೊಂದಣಿ ಸಂಖ್ಯೆಃಕೆಎ 19-ಡಿ-9907 ನೇಯದರ ಹಿಂಬದಿ ಮತ್ತು ಮುಂಬದಿಯ ನಂಬರ್ ಪ್ಲೇಟ್ ಅನ್ನು ಉಜ್ಜಿ ಅಳಿಸಿ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 489 ಸಹವಾಚಕ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಏಳನೇಯದಾಗಿ, 2 ನೇ ಆರೋಪಿತರಾದ ನೀವು ಈ ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ನಿಮ್ಮ ಮಾಲೀಕತ್ವದ ಪಿಕಾಪ್ ವಾಹನ ನೊಂದಣಿ ಸಂಖ್ಯೆಃಕೆಎ 19-ಡಿ-9907 ನೇಯದಕ್ಕೆ ವಾಯು ಮಾಲಿನ್ಯ ದೃಢಪತ್ರವನ್ನು ಹೊಂದಿರದೇ

ಇದ್ದು ಆ ಮೂಲಕ ಭಾರತೀಯ ಮೋಟಾರು ವಾಹನ ಕಾಯ್ದೆ 115 ಸಹವಾಚಕ 190(2) ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಎಂಟನೇಯದಾಗಿ, 2 ನೇ ಆರೋಪಿತರಾದ ನೀವು ಈ ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ನಿಮ್ಮ ಮಾಲೀಕತ್ವದ ಪಿಕಾಪ್ ವಾಹನ ನೊಂದಣಿ ಸಂಖ್ಯೆಃಕೆಎ 19-ಡಿ-9907 ನೇಯದರಲ್ಲಿ ಜಾನುವಾರುಗಳನ್ನು ಸಾಗಿಸುವ ಕುರಿತು ಯಾವುದೇ ಪರವಾನಗೆಯನ್ನು ಹೊಂದಿರದೇ ಇದ್ದು, ಆ ಮೂಲಕ ಸಿ.ಎಮ್.ವಿ ನಿಯಮ 96, ಪ್ರಾಣಿ ಸಾಗಾಟ ಕಾಯ್ದೆ 2001 ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಒಂಬತ್ತನೇಯದಾಗಿ, 2 ನೇ ಆರೋಪಿತರಾದ ನೀವು ಈ ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ನಿಮ್ಮ ಮಾಲೀಕತ್ವದ ಪಿಕಾಪ್ ವಾಹನ ನೊಂದಣಿ ಸಂಖ್ಯೆಃಕೆಎ 19-ಡಿ-9907 ನೇಯದಕ್ಕೆ ಅರ್ಹತಾ ಪತ್ರ ಹೊಂದಿರದೇ ಇದ್ದು, ಆ ಮೂಲಕ ಭಾರತೀಯ ಮೋಟಾರು ವಾಹನ ಕಾಯ್ದೆ 52 ಸಹವಾಚಕ 192 ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಹತ್ತನೇಯದಾಗಿ, 2 ನೇ ಆರೋಪಿತರಾದ ನೀವು ಈ ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ಜಾನುವಾರುಗಳನ್ನು ಸಾಗಿಸುವ ಯಾವುದೇ ಪರವಾನಗೆಯನ್ನು ಹೊಂದದೇ ಮತ್ತು ಸಾಗಿಸಿದ ಜಾನುವಾರುಗಳ ಬಗ್ಗೆ ಯಾವುದೇ ಸರಿಯಾದ ದಾಖಲೆಯನ್ನು ನೀಡದೇ ಇದ್ದು, ಆ ಮೂಲಕ 102 ಸಿ ಆರ್ ಪಿ ಸಿ ಸಹವಾಚಕ ಕರ್ನಾಟಕ ಪೊಲೀಸ್ ಕಾಯ್ದೆ 98 ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲ್ಕಂಡ ದೋಷಾರೋಪಣಗಳಿಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ಆರೋಪಣೆಯ ವಿವರಣೆಯನ್ನು ಆಪಾದಿತರಿಗೆ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಓದಿ ಹೇಳಿ, ವಿವರಿಸಿ ನಂತರ ಅವರು ನೀಡಿದ ಯಥಾವತ್ ಹೇಳಿಕೆಯನ್ನು ಬರೆದುಕೊಳ್ಳಲಾಯಿತು).

ಎ..ಹೆ. ಸಿ ನ್ಯಾ ಮತ್ತು ಪ್ರ ದ ನ್ಯಾ ದಂ.,
ಕಾರ್ಕಳ.

**ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಾರ್ಕಳ ಇವರ ನ್ಯಾಯಾಲಯದಲ್ಲಿ**

ದಿನಾಂಕ 12 ನೇ ಜೂನ್ ಮಾಹೆ 2023 ನೇ ಇಸವಿ.

**ಕ್ರಿಮಿನಲ್ ಮೊಕದ್ದಮೆ ನಂಃ 1707/2022**

ರಾಜ್ಯ ಸರ್ಕಾರದ ಪರವಾಗಿ

ಠಾಣಾಧಿಕಾರಿ,
ಹೆಬ್ರಿ ಪೋಲಿಸ್ ಠಾಣೆ,
ಹೆಬ್ರಿ, ಉಡುಪಿ ಜಿಲ್ಲೆ. ... ಪಿರ್ಯಾದುದಾರರು

- ವಿರುದ್ಧ -

ಅಜೀಜ್
ಪ್ರಾಯಃ 34 ವರ್ಷಗಳು,
ತಂದೆಃ ಇಸ್ಮಾಯಿಲ್,
ವಾಸಃ ನಂ.2-105, ಕಾಂತಾರ ಬೆಟ್ಟು ಹೌಸ್,
ಉಲಾಯಿಬೆಟ್ಟು ಅಂಚೆ ಮತ್ತು ಗ್ರಾಮ,
ಮಂಗಳೂರು ತಾಲೂಕು, ದ.ಕ. ಜಿಲ್ಲೆ ... 1 ನೇ ಆರೋಪಿ

**ದೋಷಾರೋಪಣೆ**

ಪ್ರಶ್ನೆಃ ನಿಮಗೆ ಮೇಲೆ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೆ?

ಉತ್ತರ ಃ

ಪ್ರಶ್ನೆಃ ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುವಿರೋ?

ಉತ್ತರ ಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ವಿವರಿಸಿ ಹೇಳಿದ್ದು ಅವರು ಹೇಳಿದ ಉತ್ತರವನ್ನು ನಾನೇ ಸ್ವತಃ ಯಥಾವತ್ತಾಗಿ ಬರೆದುಕೊಂಡಿರುವುದು ನಿಜವೆಂದು ದೃಢೀಕರಿಸುತ್ತೇನೆ)

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಕಾರ್ಕಳ.

**ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಾರ್ಕಳ ಇವರ ನ್ಯಾಯಾಲಯದಲ್ಲಿ**

ದಿನಾಂಕ 12 ನೇ ಜೂನ್ ಮಾಹೆ 2023 ನೇ ಇಸವಿ.

ಕ್ರಿಮಿನಲ್ ಮೊಕದ್ದಮೆ ನಂಃ 1707/2022

ರಾಜ್ಯ ಸರ್ಕಾರದ ಪರವಾಗಿ

ಠಾಣಾಧಿಕಾರಿ,
ಹೆಬ್ರಿ ಪೋಲಿಸ್ ಠಾಣೆ,
ಹೆಬ್ರಿ, ಉಡುಪಿ ಜಿಲ್ಲೆ. ... ಪಿರ್ಯಾದುದಾರರು

- ವಿರುದ್ಧ -

ರಹೀಮ್,
ಪ್ರಾಯಃ 39 ವರ್ಷ
ತಂದೆಃ ಎಂ.ಡಿ ಮೊಹಮ್ಮದ್,
ವಾಸಃ 4-139, ಶಾಂತಿಗುಡ್ಡೆ, ಜೋಡುಕಟ್ಟೆ ಅಂಚೆ,
62 ನೇ ತೋಕುರು ಗ್ರಾಮ,
ಮಂಗಳೂರು ತಾಲೂಕು, ದ.ಕ. ಜಿಲ್ಲೆ ... 2 ನೇ ಆರೋಪಿ

ದೋಷಾರೋಪಣೆ

ಪ್ರಶ್ನೆಃ ನಿಮಗೆ ಮೇಲೆ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೆ?

ಉತ್ತರ ಃ

ಪ್ರಶ್ನೆಃ ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುವಿರೋ?

ಉತ್ತರ ಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ವಿವರಿಸಿ ಹೇಳಿದ್ದು ಅವರು ಹೇಳಿದ ಉತ್ತರವನ್ನು ನಾನೇ ಸ್ವತಃ ಯಥಾವತ್ತಾಗಿ ಬರೆದುಕೊಂಡಿರುವುದು ನಿಜವೆಂದು ದೃಢೀಕರಿಸುತ್ತೇನೆ)

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಕಾರ್ಕಳ.

**ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಾರ್ಕಳ ಇವರ ನ್ಯಾಯಾಲಯದಲ್ಲಿ**

ದಿನಾಂಕ 12 ನೇ ಜೂನ್ ಮಾಹೆ 2023 ನೇ ಇಸವಿ.

ಕ್ರಿಮಿನಲ್ ಮೊಕದ್ದಮೆ ನಂಃ 1707/2022

ರಾಜ್ಯ ಸರ್ಕಾರದ ಪರವಾಗಿ

ಠಾಣಾಧಿಕಾರಿ,
ಹೆಬ್ರಿ ಪೋಲಿಸ್ ಠಾಣೆ,
ಹೆಬ್ರಿ, ಉಡುಪಿ ಜಿಲ್ಲೆ. ... ಪಿರ್ಯಾದುದಾರರು

- ವಿರುದ್ಧ -

ಮೊಹಮ್ಮದ್ ಆಶಿಕ್,
ಪ್ರಾಯಃ 24 ವರ್ಷ
ತಂದೆಃ ಮೊಹಮ್ಮದ್ ಫಾರೂಕ್,
ವಾಸಃ 3-8 ಎ, ಬಂಡಶಾಲೆ ಹೌಸ್, ಜೋಡುಕಟ್ಟೆ ಅಂಚೆ,
62 ನೇ ತೋಕುರು ಗ್ರಾಮ,
ಮಂಗಳೂರು ತಾಲೂಕು, ದ.ಕ. ಜಿಲ್ಲೆ ... 3 ನೇ ಆರೋಪಿ

ದೋಷಾರೋಪಣೆ

ಪ್ರಶ್ನೆಃ ನಿಮಗೆ ಮೇಲೆ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೆ?

ಉತ್ತರ ಃ

ಪ್ರಶ್ನೆಃ ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುವಿರೋ?

ಉತ್ತರ ಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ವಿವರಿಸಿ ಹೇಳಿದ್ದು ಅವರು ಹೇಳಿದ ಉತ್ತರವನ್ನು ನಾನೇ ಸ್ವತಃ ಯಥಾವತ್ತಾಗಿ ಬರೆದುಕೊಂಡಿರುವುದು ನಿಜವೆಂದು ದೃಢೀಕರಿಸುತ್ತೇನೆ)

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಕಾರ್ಕಳ.

**ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಾರ್ಕಳ ಇವರ ನ್ಯಾಯಾಲಯದಲ್ಲಿ**

ದಿನಾಂಕ 12 ನೇ ಜೂನ್ ಮಾಹೆ 2023 ನೇ ಇಸವಿ.

ಕ್ರಿಮಿನಲ್ ಮೊಕದ್ದಮೆ ನಂಃ 1707/2022

ರಾಜ್ಯ ಸರ್ಕಾರದ ಪರವಾಗಿ

ಠಾಣಾಧಿಕಾರಿ,
ಹೆಬ್ರಿ ಪೋಲಿಸ್ ಠಾಣೆ,
ಹೆಬ್ರಿ, ಉಡುಪಿ ಜಿಲ್ಲೆ. ... ಪಿರ್ಯಾದುದಾರರು

- ವಿರುದ್ಧ -

ಹರೂನ್ ರಶಿದ್,
ಪ್ರಾಯಃ 35 ವರ್ಷ
ತಂದೆಃ ಉಮ್ಮರ್ ಫಾರೂಕ್,
ವಾಸಃ 4-80, ಬೆಟ್ಟು ಹೌಸ್, ಕೆ.ಬಿ.ಎಸ್,
62 ನೇ ತೋಕೂರು ಗ್ರಾಮ, ಜೋಡುಕಟ್ಟೆ ಅಂಚೆ,
ಬೈಕಂಪಾಡಿ, ಮಂಗಳೂರು ತಾಲೂಕು, ದ.ಕ. ಜಿಲ್ಲೆ ... 4 ನೇ ಆರೋಪಿ

ದೋಷಾರೋಪಣೆ

ಪ್ರಶ್ನೆಃ ನಿಮಗೆ ಮೇಲೆ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೆ?

ಉತ್ತರ ಃ

ಪ್ರಶ್ನೆಃ ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುವಿರೋ?

ಉತ್ತರ ಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ವಿವರಿಸಿ ಹೇಳಿದ್ದು ಅವರು ಹೇಳಿದ ಉತ್ತರವನ್ನು ನಾನೇ ಸ್ವತಃ ಯಥಾವತ್ತಾಗಿ ಬರೆದುಕೊಂಡಿರುವುದು ನಿಜವೆಂದು ದೃಢೀಕರಿಸುತ್ತೇನೆ)

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಕಾರ್ಕಳ.

**ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಾರ್ಕಳ ಇವರ ನ್ಯಾಯಾಲಯದಲ್ಲಿ**

ದಿನಾಂಕ 12 ನೇ ಜೂನ್ ಮಾಹೆ 2023 ನೇ ಇಸವಿ.

ಕ್ರಿಮಿನಲ್ ಮೊಕದ್ದಮೆ ನಂಃ 1707/2022

ರಾಜ್ಯ ಸರ್ಕಾರದ ಪರವಾಗಿ

ಠಾಣಾಧಿಕಾರಿ,
ಹೆಬ್ರಿ ಪೋಲಿಸ್ ಠಾಣೆ,
ಹೆಬ್ರಿ, ಉಡುಪಿ ಜಿಲ್ಲೆ. ... ಪಿರ್ಯಾದುದಾರರು

- ವಿರುದ್ಧ -

ಹಸನಬ್ಬ,
ಪ್ರಾಯಃ 36 ವರ್ಷ
ತಂದೆಃ ಹುಸೈನಬ್ಬ,
ವಾಸಃ 4-112/10, ಕೆಂಜಾರು ಅಂಜುಮಾನ್ ಶಾಲೆಯ ಬಳಿ,
ಕೆಂಜಾರು ಗ್ರಾಮ, ಬೈಕಂಪಾಡಿ,
ಮಂಗಳೂರು ತಾಲೂಕು, ದ.ಕ. ಜಿಲ್ಲೆ ... 5 ನೇ ಆರೋಪಿ

ದೋಷಾರೋಪಣೆ

ಪ್ರಶ್ನೆಃ ನಿಮಗೆ ಮೇಲೆ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೆ?

ಉತ್ತರ ಃ

ಪ್ರಶ್ನೆಃ ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುವಿರೋ?

ಉತ್ತರ ಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ವಿವರಿಸಿ ಹೇಳಿದ್ದು ಅವರು ಹೇಳಿದ ಉತ್ತರವನ್ನು ನಾನೇ ಸ್ವತಃ ಯಥಾವತ್ತಾಗಿ ಬರೆದುಕೊಂಡಿರುವುದು ನಿಜವೆಂದು ದೃಢೀಕರಿಸುತ್ತೇನೆ)

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಕಾರ್ಕಳ.